ದಿನಾಂಕ : DATE :
ವಿಷಯ / DEPARTMENT / SUBJECT :
ಪತ್ರಿಕೆಯ ಹೆಸರು : NAME OF THE NEWS PAPER :

### ಮುಂದಿನ ವರ್ಷ ಜೂನ್ 22ಕ್ಕೆ ಜಿಎಸ್‌ಟಿ ಪರಿಹಾರ ಅಂತ್ಯ | ಪರಿಹಾರ ಅಂತ್ಯದಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳಾಗಲಿದೆ

# ಜಿಎಸ್‌ಟಿ ಪರಿಹಾರ ಮುಂದುವರಿಕೆಗೆ ಒತ್ತಾಯ

ವಿಧಾನಸಭೆ: ಕೇಂದ್ರ ಸರಕಾರದಿಂದ ರಾಜ್ಯಗಳಿಗೆ ಬರುವ ಜಿಎಸ್‌ಟಿ ಪರಿಹಾರವನ್ನು ಇನ್ನೂ 5 ವರ್ಷಗಳ ಕಾಲ ಮುಂದುವರಿಸುವಂತೆ ಕೇಂದ್ರಕ್ಕೆ ಒತ್ತಾಯಿಸಿ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ರಾಜ್ಯ ಸರಕಾರಕ್ಕೆ ಸಲಹೆ ನೀಡಿದರು.


ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ಬರುವ ವರ್ಷದ ಜೂನ್ 22ಕ್ಕೆ ಜಿಎಸ್‌ಟಿ ಪರಿಹಾರ ಅಂತ್ಯವಾಗುತ್ತದೆ. ಜೂನ್ 2022ರ ನಂತರ ರಾಜ್ಯಗಳಿಗೆ ಕೇಂದ್ರದ ಜಿಎಸ್‌ಟಿ ಪರಿಹಾರ ಬರುವುದಿಲ್ಲ. ಇದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಳಾಗುತ್ತದೆ. ಹಾಗಾಗಿ ಜಿಎಸ್‌ಟಿ ಪರಿಹಾರವನ್ನು 5 ವರ್ಷಗಳ ಕಾಲ ಮುಂದುವರಿಸಿ ಎಂದು ಕೇಂದ್ರಕ್ಕೆ ಒತ್ತಾಯಿಸಿ ಎಂದರು.

- 5 ವರ್ಷಗಳಲ್ಲಿ ಕೇಂದ್ರದಿಂದ 1.5 ಲಕ್ಷ ಕೋಟಿ ಬರಬೇಕಾದ ಹಣ ಬಂದಿಲ್ಲ
- ರಾಜ್ಯ ಸರಕಾರವೂ ಬರುವ ಹಣವನ್ನು ಕೇಳುವ ಧೈರ್ಯ ಮಾಡಿಲ್ಲ
- 25 ಜನ ಸಂಸದರು ಇದ್ದೀರಿ, ಪ್ರಧಾನಿಗಳ ಬಳಿಗೆ ಹೋಗಿ ತೆರಿಗೆ ಪಾಲನ್ನು ಕೇಳಿ

ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ತೆರಿಗೆ ಪಾಲು ಬಂದಿಲ್ಲ. ಕಳೆದ 5 ವರ್ಷಗಳಲ್ಲಿ 1.5 ಲಕ್ಷ ಕೋಟಿ ಬರಬೇಕಾದ ಹಣ ಬಂದಿಲ್ಲ. ರಾಜ್ಯ ಸರಕಾರವೂ ಬರುವ ಹಣವನ್ನು ಕೇಳುವ ಧೈರ್ಯ ಮಾಡಿಲ್ಲ. ಪತ್ರ ಬರೆದಿರಬಹುದು ಅಷ್ಟೆ, ಕೇಂದ್ರದಿಂದ ನ್ಯಾಯಯುತವಾಗಿ ಬರಬೇಕಾಗಿರುವ ಪಾಲನ್ನು ಕೇಳದೆ ಏಕೆ ಸುಮ್ಮನಿದ್ದೀರಿ? ನಾನೇನು ಕೇಂದ್ರದ ಜತೆಗೆ ಸಂಘರ್ಷಕ್ಕೆ ಇಳಿಯಿರಿ ಎಂದು ಹೇಳುತ್ತಿಲ್ಲ. 25 ಜನ ಸಂಸದರು ಇದ್ದೀರಿ. ಪ್ರಧಾನಿಗಳ ಬಳಿಗೆ ಹೋಗಿ ರಾಜ್ಯಕ್ಕೆ ಬರಬೇಕಾಗಿರುವ ತೆರಿಗೆ ಪಾಲನ್ನು ಕೇಳಿ ಎಂದು ಹೇಳಿದರು.

ಪ್ರಧಾನಿಗಳನ್ನು ಭೇಟಿ ಮಾಡುವ ಸೌಜನ್ಯವನ್ನೆ ಯಾರು ತೋರುತ್ತಿಲ್ಲ. ಹೀಗಾದರೆ ಹೇಗೆ, ಕೇಂದ್ರದಿಂದ ನಮಗೆ ಬರಬೇಕಾಗಿರುವುದು ಬರುತ್ತದೆ. ಅದು ನಮ್ಮ ನ್ಯಾಯಯುತವಾದ ಹಕ್ಕು. ಈ ಹಕ್ಕನ್ನು ಚಲಾಯಿಸಿ, ತೆರಿಗೆ ಪಾಲು ಪಡೆಯಿರಿ ಎಂದು ಒತ್ತಾಯಿಸಿದರು.

## ತೆರಿಗೆ ಇಲ್ಲದ ಬಜೆಟ್ ಎಂದು ಮಾಧ್ಯಮಗಳ ಬಣ್ಣನೆ



ಮಂಡನೆಯಾದ ಬಜೆಟ್ ಅನ್ನು ಮಾಧ್ಯಮಗಳು ತೆರಿಗೆ ಇಲ್ಲದ ಬಜೆಟ್ ಎಂದು ಬಣ್ಣಿಸಿದವು. ಜಿಎಸ್‌ಟಿ ಬಂದ ಮೇಲೆ ರಾಜ್ಯ ಸರಕಾರಕ್ಕೆ ತೆರಿಗೆ ಹಾಕಲು ಅವಕಾಶ ಎಲ್ಲಿದೆ. ಎಲ್ಲಿ ತೆರಿಗೆ ಹಾಕಬೇಕು, ಪೆಟ್ರೋಲ್-ಡೀಸೆಲ್ ಬಿಟ್ಟರೆ ಬೇರೆ ವಸ್ತುಗಳ ಮೇಲೆ ತೆರಿಗೆ ಹಾಕಲು ಬರುವುದಿಲ್ಲ. ಪೆಟ್ರೋಲ್-ಡೀಸೆಲ್ ಬೆಲೆ ಈಗಾಗಲೇ ಗಗನ ಮುಟ್ಟಿದೆ. ಇದರ ಮೇಲೆ ಮತ್ತೆ ತೆರಿಗೆ ಹಾಕಲು ಸಾಧ್ಯವಿಲ್ಲ ಎಂದರು. ಸಂಪನ್ಮೂಲ ಕ್ರೋಡೀಕರಣದ ಎಲ್ಲ ಬಾಗಿಲು ಮುಚ್ಚಿದೆ. ಈಗ ತೆರಿಗೆ ಹಾಕಲು ಅವಕಾಶ ಎಲ್ಲಿದೆ. ಮಾಧ್ಯಮಗಳು ತೆರಿಗೆ ಭಾರವಿಲ್ಲದ ಬಜೆಟ್ ಎಂದು ಬರೆಯುವ ಬದಲು ತೆರಿಗೆ ಹಾಕಲು ಅವಕಾಶ ಇಲ್ಲ ಎಂದು ಬರೆದಿದ್ದರೆ ಸರಿಯಾಗಿರುತ್ತಿತ್ತು ಎಂದು ಹೇಳಿದರು.

ಜಿಎಸ್‌ಟಿ ಪರಿಹಾರವನ್ನು ಕೇಂದ್ರ ಸರಕಾರ ಈ ವರ್ಷ ನೀಡಲಿಲ್ಲ. ಅದರ ಬದಲು ಸಾಲ ತೆಗೆದುಕೊಳ್ಳಿ ಎಂದು ಹೇಳಿದೆ. ಅವರೇ ಸಾಲ ತೆಗೆದುಕೊಂಡು ರಾಜ್ಯಗಳಿಗೆ ಕೊಡಬೇಕಿತ್ತು. ರಾಜ್ಯಕ್ಕೆ ಸಾಲ ಪಡೆಯುವ ಪ್ರಮಾಣವೂ ಏರಿಕೆಯಾಗಿದೆ. ಆರ್ಥಿಕ ಪರಿಸ್ಥಿತಿಯೂ ಕೆಟ್ಟದಾಗಿದೆ. ಹೀಗಿರುವಾಗ ಈ ಬಜೆಟ್ ಒಳ್ಳೆಯ ಬಜೆಟ್ ಎಂದು ಹೇಳಲು ಸಾಧ್ಯವೇ ಎಂದು ಪ್ರಶ್ನಿಸಿದರು.



ವಿಧಾನಸೌಧದಲ್ಲಿ ಸೋಮವಾರ ನಡೆದ ಕಲಾಪದಲ್ಲಿ ಪ್ರತಿಪಕ್ಷದ ನಾಯಕರ ಪ್ರಶ್ನೆಗೆ ಅಧಿಕಾರಿಗಳ ಬಳಿ ಮಾಹಿತಿ ಸಂಗ್ರಹಿಸುತ್ತಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ

> ಸದಸ್ಯರುಗಳು ಪ್ರಸ್ತಾಪ ಮಾಡುತ್ತಿರುವುದನ್ನು ನೋಡಿದರೆ ಟೋಲ್‌ಗಳನ್ನು ಅವೈಜ್ಞಾನಿಕವಾಗಿ, ಅನಗತ್ಯವಾಗಿ ಕೆಲವೆಡೆ ಹಾಕಿರುವುದು ಬೆಳಕಿಗೆ ಬಂದಿದೆ. ಬಳಕೆ ಶುಲ್ಕ ವಸೂಲಿ ಮಾಡಿ, ಆದರೆ ಸುಲಿಗೆ ಬೇಡ. ಮತ್ತೊಮ್ಮೆ ಸರ್ವೆ ಮಾಡಿಸಿ ವೈಜ್ಞಾನಿಕವಾಗಿ ಟೋಲ್ ಪ್ಲಾಜಾಗಳನ್ನು ಸ್ಥಾಪಿಸಿ.
>
> - ಸಿದ್ದರಾಮಯ್ಯ ಪ್ರತಿಪಕ್ಷದ ನಾಯಕ